ಅಭಾವದಿಂದ ಪಂಪ್‌ಸೆಟ್‌ಗಳಿಗೆ ತುಂಬಾ ತೊಂದರೆಯಾಗಿ ಕಂಗಾಲಾಗಿದ್ದಾರೆ. ಆದ್ದರಿಂದ 1993–94ನೇ ಪ್ರಸ್ತುತ ವರ್ಷದಲ್ಲಿ ಬೀಳಗಿ ತಾಲ್ಲೂಕಿನಲ್ಲಿ 110 (11) ಕೆ. ವಿ. ವಿದ್ಯುತ್ ಸ್ಥಾವರವನ್ನು ಸ್ಥಾಪಿಸಿ ಈ ಭಾಗದ ರೈತರ ಪಂಪ್‌ಸೆಟ್‌ಗಳಿಗೆ ಆಗಿರುವ ವಿದ್ಯುತ್ ಅಭಾವವನ್ನು ಉತ್ತಮ ಪಡಿಸಬೇಕೆಂದು ಮಾನ್ಯ ಉಪಮುಖ್ಯಮಂತ್ರಿಗಳನ್ನು ವಿನಂತಿಸಿಕೊಳ್ಳುತ್ತೇನೆ.

ಶ್ರೀ ಕೆ. ಎ. ನಿಸಾರ್ ಅಹಮದ್ (ಇಂಧನ ರಾಜ್ಯ ಸಚಿವರು):– ಮಾನ್ಯ ಅಧ್ಯಕ್ಷರೇ, ಮಾನ್ಯ ಉಪ ಮುಖ್ಯಮಂತ್ರಿಗಳ ಪರವಾಗಿ ಈ ಕೆಳಕಂಡ ಹೇಳಿಕೆಯನ್ನು ನೀಡಲು ಬಯಸುತ್ತೇನೆ.

(ಗೊಂದಲ)

ಶ್ರೀ ಮಾಟಾಳ್ ನಾಗರಾಜ್:– ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಕನ್ನಡದಲ್ಲಿನ ಹೇಳಿಕೆಯನ್ನು ಕೊಟ್ಟು ಆಂಗ್ಲ ಭಾಷೆಯ ಹೇಳಿಕೆಯನ್ನು ಓದುತ್ತಿದ್ದಾರೆ. ಇದು ಸರಿಯಲ್ಲ ಅದು ಆಗುವುದಿಲ್ಲ. ರಾಜ್ಯಕ್ಕೆ ಸದನಕ್ಕೆ ಇದು ಅಪಮಾನ. ಅವರಿಗೆ ಕನ್ನಡವೇ ಬರುವುದಿಲ್ಲ.

(ಗೊಂದಲ)

ಅಧ್ಯಕ್ಷರು:– ತಾವು ಏಪ್ರಿಲ್ ಒಂದರವರೆಗೆ ಕಾಲಾವಕಾಶವನ್ನು ಕನ್ನಡ ಸಲುವಾಗಿ ಕೊಟ್ಟಿದ್ದೀರಿ.

ಶ್ರೀ ಕೆ. ಎ. ನಿಸಾರ್ ಅಹಮದ್:– ಮಾನ್ಯ ಅಧ್ಯಕ್ಷರೇ, ನನಗೆ ಕಾಲಾವಕಾಶ ಕೊಡಿ. ಕನ್ನಡವನ್ನು ಕಲಿಯುತ್ತಿದ್ದೇನೆ. ನನಗೆ ಕನ್ನಡದಲ್ಲಿ ಓದುವುದಕ್ಕೆ ಬರುತ್ತದೆ. ಆದರೆ ತಪ್ಪು ಓದಬಾರದೆಂದು ನಾನು ಆಂಗ್ಲಭಾಷೆಯಲ್ಲಿ ಓದುತ್ತಿದ್ದೇನೆ. ಸ್ವಲ್ಪ ಅವಕಾಶ ಕೊಡಿ.

ಶ್ರೀ ಮಾಟಾಳ್ ನಾಗರಾಜ್:– ಏಪ್ರಿಲ್ ಒಂದು ಎಂದರೆ ಗೊತ್ತಲ್ಲ. ಆ ಪರಿಸ್ಥಿತಿಯಲ್ಲಿದ್ದೇವೆ ನಾವು.

ಶ್ರೀ ಕೆ. ಎ. ನಿಸಾರ್ ಅಹಮದ್ (ಮಾನ್ಯ ಇಂಧನ ಖಾತೆ ರಾಜ್ಯ ಸಚಿವರು):– ವಿಜಾಪುರ ಜಿಲ್ಲೆಯ ಬೀಳಗಿ ತಾಲ್ಲೂಕಿನ ಕುಂದರಗಿ ಗ್ರಾಮಕ್ಕೆ ಈಗ ಬೀಳಗಿಯಲ್ಲಿರುವ 33:11 ಕೆವಿ 2 x 5 ಎಂ. ವಿ. ಎ. ಸಾಮರ್ಥ್ಯದ ಉಪವಿದ್ಯುತ್ ಕೇಂದ್ರದಿಂದ ವಿದ್ಯುತ್ ಸರಬರಾಜಾಗುತ್ತಿದ್ದು, ಈ ಬೀಳಗಿ ಉಪವಿದ್ಯುತ್ ಕೇಂದ್ರವು ಪೂರ್ಣವಾಗಿ ಲೋಡ್ ಆಗಿರುತ್ತದೆ ಮತ್ತು ಕುಂದರಗಿ ಗ್ರಾಮಕ್ಕೆ ಸರಬರಾಜಾಗುತ್ತಿರುವ ವಿದ್ಯುತ್ ವೋಲ್ಟೇಜ್ ಸ್ವಲ್ಪ ಕಡಿಮೆಯಾಗಿರುವುದು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಗಮನಕ್ಕೆ ಬಂದಿದೆ. ಈ ತೊಂದರೆಯನ್ನು ನಿವಾರಿಸಲು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ಬೀಳಗಿಯ ಉಪವಿದ್ಯುತ್ ಕೇಂದ್ರವನ್ನು 110 ಕೆವಿ ಉಪಕೇಂದ್ರವನ್ನಾಗಿ ಪರಿವರ್ತಿಸಲು ಹಾಗೂ ಕುಂದರಗಿಯಲ್ಲಿ 33:11 ಕೆವಿ 1x5 ಎಂ.ವಿ. ಎ. ಸಾಮರ್ಥ್ಯದ ಉಪ ವಿದ್ಯುತ್ ಕೇಂದ್ರವನ್ನು ಸ್ಥಾಪಿಸಲು ಮಂಜೂರಾತಿ ನೀಡಿರುತ್ತದೆ. ಆದರೆ ಬೀಳಗಿಯ 110 ಕೆವಿ ಉಪ ವಿದ್ಯುತ್ ಕೇಂದ್ರದ ಕೆಲಸವನ್ನು ಮೊದಲು ಪ್ರಾರಂಭಿಸಿ, ನಂತರ ಕುಂದರಗಿ ಉಪವಿದ್ಯುತ್ ಕೇಂದ್ರದ ಕೆಲಸವನ್ನು ಕೈಗೆತ್ತಿಕೊಳ್ಳಬೇಕಾಗಿರುತ್ತದೆ. ಈ ಕೆಲಸಗಳನ್ನು 1993–94ನೇ ಸಾಲಿನಲ್ಲಿ ಪ್ರಾರಂಭಿಸಲು ಉದ್ದೇಶಿಸಲಾಗಿದೆ.

ಪ್ರಕಟಣೆ

1. ಸದಸ್ಯರಾದ ಶ್ರೀ ಎಂ. ರಾಮಪ್ಪನವರ ಮೇಲೆ ನೀಡಿದ್ದ ಹಕ್ಕು ಚ್ಯುತಿ ಸೂಚನೆಯನ್ನು ಹಕ್ಕು ಭಾಧ್ಯತಾ ಸಮಿತಿಗೆ ಒಪ್ಪಿಸುವ ಬಗ್ಗೆ:

ಅಧ್ಯಕ್ಷರು:– ದಿನಾಂಕ 23.2.1993ರಂದು ಮಾನ್ಯ ಸದಸ್ಯರಾದ ಶ್ರೀ ಮಾಟಾಳ್ ನಾಗರಾಜ್‌ರವರು

''ಪ್ರಶ್ನೋತ್ತರ ಕಾಲ ನಡೆಯುವಾಗ ಶಾಸಕರಾದ ಶ್ರೀ ಎಂ. ರಾಮಪ್ಪರವರು, ನಾನು ಕುಳಿತಿರುವ ಕುರ್ಚಿಯ ಪಕ್ಕದಲ್ಲಿ ಬಂದು ಕುಳಿತುಕೊಂಡು ಸಮಾನಾಂತರ ಕಾಲುವೆ ಬಗ್ಗೆ ನಾನು ಸದನದಲ್ಲಿ ಪ್ರಸ್ತಾಪಿಸಿದ ವಿಚಾರದ ಬಗ್ಗೆ ನನ್ನ ಮೇಲೆ ತೀವ್ರ ಆರೋಪ ಮಾಡಿ ಬೆದರಿಕೆ ಹಾಕಿದರು'' ಎಂದು ಮಾನ್ಯ ಸದಸ್ಯರಾದ ಶ್ರೀ ಎಂ. ರಾಮಪ್ಪರವರ ಮೇಲೆ ನೀಡಿದ್ದ ಹಕ್ಕುಚ್ಯುತಿ ಸೂಚನೆಯನ್ನು ಹಕ್ಕು ಬಾಧ್ಯತಾ ಸಮಿತಿಯ ಪರಿಶೀಲನೆಗಾಗಿ ಒಪ್ಪಿಸಿರುತ್ತೇನೆ.

2. ಕರ್ನಾಟಕ ವಿದ್ಯುತ್ ಮಂಡಳಿಯ ಕಾರ್ಯ ನಿರ್ವಹಣೆ ಹಾಗೂ ಆಡಳಿತ ದಕ್ಷತೆಯನ್ನು ಉತ್ತಮಪಡಿಸಲು ಸದನದ ಸಮಿತಿಯ ನೇಮಕ.

ಕರ್ನಾಟಕ ವಿದ್ಯುತ್ ಮಂಡಳಿಯ ಕಾರ್ಯ ನಿರ್ವಹಣೆ ಹಾಗೂ ಆಡಳಿತ ದಕ್ಷತೆಯನ್ನು ಉತ್ತಮಪಡಿಸುವ ಸಲುವಾಗಿ, ಶಿಫಾರಸ್ಸುಗಳನ್ನು ನೀಡುವಂತೆ ಈ ಕೆಳಕಂಡ 11 ವಿಧಾನಸಭೆಯ ಮತ್ತು 4 ವಿಧಾನ ಪರಿಷತ್ತಿನ ಮಾನ್ಯ ಸದಸ್ಯರುಗಳನ್ನೊಳಗೊಂಡ ಸದನದ ಸಮಿತಿಯನ್ನು ನೇಮಕ ಮಾಡಲಾಗಿದೆ.

ಈ ಸಮತಿಯು ತನ್ನ ವರದಿಯನ್ನು ಇಂದಿನಿಂದ 3 ತಿಂಗಳ ಒಳಗಾಗಿ ಸಲ್ಲಿಸಲು ಸೂಚಿಸಲಾಗಿದೆ. ವಿಧಾನ ಪರಿಷತ್ತಿನಲ್ಲಿ ವಿಧಾನ ಪರಿಷತ್ತಿನ ಸದಸ್ಯರ ಹೆಸರುಗಳನ್ನು ಮಾನ್ಯ ಸಭಾಪತಿಯವರು ಪ್ರಕಟಿಸುತ್ತಾರೆ.

ಶ್ರೀಯುತರುಗಳಾದ 1. ಎ. ನಾಗರಾಜು, ಅಧ್ಯಕ್ಷರು, 2. ಎಂ. ವಿ. ವೆಂಕಟಪ್ಪ, ಸದಸ್ಯರು, 3. ಶಫಿ ಅಹ್ಮದ್, ಸದಸ್ಯರು, 4. ಬಿ. ಹೆಚ್. ಲಕ್ಷ್ಮಣಯ್ಯ, ಸದಸ್ಯರು, 5. ಶಿವಶಂಕರಪ್ಪ ಶಿರವಾಳ –ಸದಸ್ಯರು, 6. ಆರ್. ಬಿ. ತಿಮ್ಮಾಪುರ್ –ಸದಸ್ಯರು, 7. ಎನ್.ಟಿ. ಬೊಮ್ಮಣ್ಣ – ಸದಸ್ಯರು, 8. ಆರ್. ಎಲ್. ಜಾಲಪ್ಪ –ಸದಸ್ಯರು, 9. ಬಿ. ಎಸ್. ಯಡಿಯೂರಪ್ಪ –ಸದಸ್ಯರು, 10. ಬಾಬುಗೌಡ ಪಾಟೀಲ್ –ಸದಸ್ಯರು ಹಾಗೂ 11. ಸಿ. ಬೈರೇಗೌಡ – ಸದಸ್ಯರು.

3. ಕುಷ್ಟಗಿ ತಾಲ್ಲೂಕಿನಲ್ಲಿ ಅಂಗನವಾಡಿ ಕಾರ್ಯಕರ್ತೆಯ ಮೇಲೆ ನಡೆಯಿತೆನ್ನಲಾದ ಅತ್ಯಾಚಾರದ ಪರಿಶೀಲನೆಗೆ ಸದನದ ಸಮಿತಿಯ ನೇಮಕ.

ಅಧ್ಯಕ್ಷರು:– ರಾಯಚೂರು ಜಿಲ್ಲೆಯ ಕುಷ್ಟಗಿ ತಾಲ್ಲೂಕಿನ ಅಂಗನವಾಡಿ ಕಾರ್ಯಕರ್ತೆಯ ಮೇಲೆ ನಡೆಯಿತೆನ್ನಲಾದ ಅತ್ಯಾಚಾರ ಪ್ರಕರಣದ ಸತ್ಯಾಸತ್ಯತೆಯ ಪರಿಶೀಲನೆಗಾಗಿ ಈ ಕೆಳಕಂಡ 11 ವಿಧಾನ ಸಭೆಯ ಹಾಗೂ 4 ವಿಧಾನ ಪರಿಷತ್ತಿನ ಸದಸ್ಯರನ್ನೊಳಗೊಂಡ ಒಂದು ಸದನದ ಸಮಿತಿಯನ್ನು ನೇಮಕ ಮಾಡಲಾಗಿದೆ. ಈ ಸದನ ಸಮಿತಿಯು ತನ್ನ ವರದಿಯನ್ನು 30 ದಿನಗಳ ಒಳಗಾಗಿ ನೀಡುವಂತೆ ಸೂಚಿಸಲಾಗಿದೆ. ವಿಧಾನ ಪರಿಷತ್ತಿನಲ್ಲಿ ವಿಧಾನ ಪರಿಷತ್ತಿನ ಸದಸ್ಯರ ಹೆಸರುಗಳನ್ನು ಮಾನ್ಯ ಸಭಾಪತಿಯವರು ಪ್ರಕಟಿಸುತ್ತಾರೆ.

ಶ್ರೀಯುತರುಗಳಾದ:

1. ಅಬ್ದುಲ್ ಹಕೀಮ್ ಮಹಮದ್ ಗೌಸ್ ಹಿಂಡಸ್ಗೇರಿ, ಅಧ್ಯಕ್ಷರು
2. ಶ್ರೀಮತಿ ಮೋಟಮ್ಮ ಸದಸ್ಯರು
3. ಎ. ಟಿ. ರಾಮಸ್ವಾಮಿ, ಸದಸ್ಯರು
4. ಸಿ. ಎಂ. ಲಿಂಗಪ್ಪ, ಸದಸ್ಯರು
5. ಮುನಿನರಸಿಂಹಯ್ಯ, ಸದಸ್ಯರು
6. ಕೆ. ಶಿವಮೂರ್ತಿ, ಸದಸ್ಯರು

7. ರೇವಣ್ಣ, ಸದಸ್ಯರು
8. ಪ್ರೊ: ಎಂ. ಡಿ. ನಂಜುಂಡಸ್ವಾಮಿ, ಸದಸ್ಯರು
9. ಈಶ್ವರಪ್ಪ, ಸದಸ್ಯರು
10. ಎಂ. ನಾರಾಯಣಸ್ವಾಮಿ, ಸದಸ್ಯರು
11. ಎಂ. ಎಸ್. ಪಾಟೀಲ್, ಸದಸ್ಯರು

ನಿಯಮ 68ರ ಮೇರೆಗಿನ ಚರ್ಚೆ:-

ಶ್ರೀ ಮಾಟಾಳ್ ನಾಗರಾಜ್:- ಈಗ 6.10 ಗಂಟೆ ಆಗಿದೆ; ಆದ್ದರಿಂದ ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇವೆ, ನಾಳೆ ಬೆಳಿಗ್ಗೆ 9.30ಕ್ಕೆ ಸದನ ಸೇರತಕ್ಕದ್ದು ಇದೆ. ಪ್ರಶ್ನೋತ್ತರ ಕಾಲಕ್ಕೆ ಮುಂಚಿತವಾಗಿ ಇವತ್ತು ತಾವು ಏನು ಉತ್ತರಕ್ಕೆ ಅವಕಾಶ ಕೊಟ್ಟಿರಿ ಆ ರೀತಿ ಚರ್ಚೆಗೂ ಅವಕಾಶ ಕೊಟ್ಟು ಅನುಕೂಲ ಮಾಡಿಕೊಡಿ ಎಂದು ಕೇಳುತ್ತೇವೆ.

ಶ್ರೀ ಬಿ. ಎಸ್. ಯಡಿಯೂರಪ್ಪ:- ಕನಿಷ್ಠ ಎರಡು ಗಂಟೆ ಬೇಕಾಗುತ್ತದೆ. ಬೆಳಿಗ್ಗೆ ಹತ್ತು ಗಂಟೆಗೆ ಬಂದಿರುತ್ತೇವೆ. ಈಗ ಅದರ ಮಹತ್ವ ಬರುವುದಿಲ್ಲ. ನಾಳೆ ಪ್ರಶ್ನೋತ್ತರಕ್ಕೆ ಮುಂಚೆ ತೆಗೆದುಕೊಂಡರೆ ನಾವು ಚರ್ಚೆಯಲ್ಲಿ ಭಾಗವಹಿಸುವುದಕ್ಕೆ ಅನುಕೂಲವಾಗುತ್ತದೆ.

ಅಧ್ಯಕ್ಷರು:- ಕ್ವೆಶ್ಚನ್ ಆವರ್ ಮುಂದೂಡಬೇಕಾಗುತ್ತದಲ್ಲಾ.

ಶ್ರೀ ಬಿ. ಎಸ್. ಯಡಿಯೂರಪ್ಪ:- ಕ್ವಶ್ಚನ್ ಅವರ್‌ಗೆ ಮುಂಚೆ ತೆಗೆದುಕೊಂಡು ಆಮೇಲೆ ಕ್ವಶ್ಚನ್ ಅವರ್ ತೆಗೆದುಕೊಳ್ಳಿ.

ಶ್ರೀ ಡಿ. ಕೆ. ಶಿವಕುಮಾರ್:- ನಮ್ಮ ಸಾತನೂರು ಕ್ಷೇತ್ರದಲ್ಲಿ ಕಾಲರಾ ಪ್ರಾರಂಭವಾಗಿ ನಿನ್ನೆಯಿಂದ 3 ಜನ ಸತ್ತಿದ್ದಾರೆ. ಇದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಆರ್. ವಿ. ದೇಶಪಾಂಡೆ:- ಕ್ವಶ್ಚನ್ ಅವರ ಆದನಂತರ ರೂಲ್ 68 ತೆಗೆದುಕೊಳ್ಳಿ.

ಶ್ರೀ ಪಿ. ಜಿ. ಆರ್. ಸಿಂಧ್ಯ:- ಕನಕಪುರ ತಾಲ್ಲೂಕಿನಲ್ಲಿ ಕಾಲರಾ ಆಗಲೇ ಅವರಿಸಿಕೊಂಡಿದ್ದು ಮಂಡ್ಯ ಜಿಲ್ಲೆಯಲ್ಲಿ .....

ಅಧ್ಯಕ್ಷರು:- ಪ್ರಸ್ತಾವನೆ ಮಾಡುವುದಕ್ಕೆ ಬೇಡ ಅನ್ನುವುದಿಲ್ಲ. ಆದರೆ .....

ಶ್ರೀ ಪಿ.ಜಿ. ಆರ್. ಸಿಂಧ್ಯ:- ನಮ್ಮ ಮನಸ್ಸಿನ ನೋವನ್ನು ಅರ್ಥಮಾಡಿಕೊಳ್ಳಿ. ಸರ್ಕಾರದ ಗಮನಕ್ಕೆ ತರುವುದು ಏನೆಂದರೆ ಮೈಸೂರಿನಲ್ಲಿ 250 ಹಳ್ಳಿಗಳಲ್ಲಿ ಕಾಲರಾ ಹರಡಿದ್ದು ಮಂಡ್ಯಕ್ಕೂ ಹರಡಿದೆ. ಕನಕಪುರದಲ್ಲಿ 3 ಜನ ಸತ್ತಿದ್ದಾರೆ. ಮಳವಳ್ಳಿ ಮೂಲಕ ಕನಕಪುರಕ್ಕೆ ಬಂದಿದೆ. ಇದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ, ತಾವು ಏನು ಮಾಡುತ್ತೀರೆಂಬುದನ್ನು ವಿಚಾರ ಮಾಡಿ.

ಶ್ರೀ ಡಿ. ಕೆ. ಶಿವಕುಮಾರ್:- ಆಸ್ಪತ್ರೆಯಲ್ಲಿ ಔಷಧಿ ಇಲ್ಲ, ಕುಡಿಯುವ ನೀರಿಗೆ ಮದ್ದು ಇಲ್ಲ.

ಅಧ್ಯಕ್ಷರು:- ತಾವು ಹೇಳಿದ್ದು ಮೈಸೂರು ಬಗ್ಗೆ ಪ್ರಸ್ತಾವನೆ ಬಂದಿತು. ತಾವು ಹೇಳಿದ್ದಕ್ಕೆ ಎಂದೂ ನಾನು ನಿರಾಕರಣೆ ಮಾಡಿಲ್ಲ.

ಶ್ರೀ ಪಿ. ಜಿ. ಆರ್. ಸಿಂಧ್ಯ:- ತಮ್ಮ ಕೊಠಡಿಗೆ ಬೆಳಿಗ್ಗೆ ಹರ್ಷಕುಮಾರ್ ಅವರ ಜೊತೆಯಲ್ಲಿ ಬಂದು ಪತ್ರಿಕೆಗಳನ್ನು ತೋರಿಸಿ ಮೈಸೂರಿನಲ್ಲಿರತಕ್ಕ ವಿಚಾರವನ್ನು ಹೇಳಿದ್ದೇನೆ. ತಾವು ಸಭಾಧ್ಯಕ್ಷರು. ಈ ಸಭೆಗೆ ಕೆಲವು ನಿಯಮಾವಳಿಗಳನ್ನು ರಚನೆ ಮಾಡಿದ್ದೇವೆ. ತಾವು, ನಿಯಮಾವಳಿಗಳು, ಅದನ್ನು